**ದಿನಾಂಕಃ23.06.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಸಿ.ಎಂ. ವಕೀಲರಿಂದಃ–**

1. ದಾವಾ ಬಿ ಷೆಡ್ಯೂಲ್ ಸ್ವತ್ತು ರತ್ನಮ್ಮ ಗಂಡ ಲೇಟ್ ತಿಪ್ಪೇಸ್ವಾಮಿಯರಿಗೆ ಮಂಜೂರಾಗಿರುತ್ತದೆ. ನನ್ನ ತಾಯಿ ರತ್ನಮ್ಮನವರಿಗೆ ಸದರಿ ಒಂದೇ ಸ್ವತ್ತು ಮಂಜೂರಾಗಿರುತ್ತದೆ. ನನ್ನ ಹೆಸರಿಗೆ ಯಾವುದೇ ಸ್ವತ್ತು ಮಂಜೂರಾಗಿರುವುದಿಲ್ಲ. ಮಂಜೂರಾದ ಸ್ವತ್ತಿಗೆ ಹೊಂದಿಕೊಂಡಂತೆ ನಮಗೆ ಸೇರಿದ ಯಾವುದೇ ಸ್ವತ್ತು ಇರಲಿಲ್ಲ. ನಾನು ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ನನ್ನ ತಾಯಿ ರತ್ನಮ್ಮನವರ ಹೆಸರಿಗೆ ಮಂಜೂರಾದ ಸ್ವತ್ತಿನ ವಿಸ್ತೀರ್ಣ 30X30 ಆಗಿರುತ್ತದೆ. ಸದರಿ ವಿಸ್ತೀರ್ಣದ ಸ್ವತ್ತನ್ನು ಹೊರತುಪಡಿಸಿ ಬೇರೆ ಸ್ವತ್ತಿಗೆ ನಮಗೆ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿ.

2. ನಾನು ಎಸ್.ಎಸ್.ಎಲ್.ಸಿ., ವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಇಂಗ್ಲೀಷ್ ಬರುವುದಿಲ್ಲ. ನಿಡಿ–5 ನಮ್ಮ ಸ್ವತ್ತಿಗೆ ಸಂಬಂಧಿಸಿದ್ದಾಗಿದೆ. ನಿಡಿ–5 ರಲ್ಲಿ ವಿಸ್ತೀರ್ಣ 150.50 ಚದರ ಮೀಟರ್ ಎಂದು ನಮೂದಾಗಿದೆ ಎಂದರೆ ಸರಿ. ಅದೇ ರೀತಿ ಅಳತೆ ಪೂರ್ವ–ಪಶ್ಚಿಮ 18.29 ಮೀಟರ್ ಎಂದು, ಉತ್ತರ–ದಕ್ಷಿಣ 8.23 ಮೀಟರ್ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಅಳತೆಯ ಜಾಗಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ಮಂಜೂರಾತಿ ಪತ್ರ ನೀಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಒಂದೇ ಮಂಜೂರಾತಿ ಪ್ರಮಾಣ ಪತ್ರ ನೀಡಿರುತ್ತಾರೆ.

3. ನಿಡಿ–4 ರ ಹಕ್ಕುಪತ್ರದಲ್ಲಿ ಸ್ವತ್ತಿನ ವಿಸ್ತೀರ್ಣ 30X30 ಎಂದು ನಮೂದಾಗಿದೆ ಎಂದರೆ ಸರಿ. ನಾನು ತಕರಾರಿನಲ್ಲಿ ತಿಳಿಸಿರುವಂತೆ ನಾನು ಕಟ್ಟಿರುವ ಮನೆಯ ಪೂರ್ವ ಮತ್ತು ಪಶ್ಚಿಮಕ್ಕೆ– ದಾರಿ ಇದೆ. ಉತ್ತರಕ್ಕೆ–ಚನ್ನಬಸಮ್ಮನವರ ಮನೆ, ದಕ್ಷಿಣಕ್ಕೆ–ಮುದ್ದುರಂಗಯ್ಯನವರ ಮನೆ ಇದೆ. ನಿಡಿ–4

ಹಕ್ಕುಪತ್ರದಲ್ಲಿ ಮೇಲೆ ಹೇಳಲಾದ ಚೆಕ್ಕುಬಂದಿಯನ್ನು ನಮೂದಿಸಲಾಗಿದೆ. ನಾನು ನಿಡಿ-4 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯಂತೆ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆ. ನಮ್ಮ ಮನೆಯ ಅಕ್ಕಪಕ್ಕ ಒಬ್ಬರೇ ಮುದ್ದುರಂಗಪ್ಪ ಹೆಸರಿನವರು ಇದ್ದಾರೆ. ನಿಡಿ-4 ರಲ್ಲಿ ಪೂರ್ವಕ್ಕೆ ಮುದ್ದುರಂಗಯ್ಯನವರ ಮನೆ ಎಂದು ನಮೂದಾಗಿರುವುದು ಸರಿ ಇಲ್ಲ. ಪೂರ್ವಕ್ಕೆ ಚೆಕ್ಕುಬಂದಿ ತಪ್ಪಾಗಿದೆ ತಿದ್ದುಪಡಿ ಮಾಡಿಕೊಡಿ ಎಂದು ಯಾವುದೇ ಅರ್ಜಿ ನೀಡಿರುವುದಿಲ್ಲ. ಈಗ ಮುದ್ದುರಂಗಯ್ಯನವರ ಮನೆಯಲ್ಲಿ ಅವರ ಸೊಸೆ ಪ್ರಮೀಳಮ್ಮನವರು ಇದ್ದಾರೆ.

4. ನನ್ನ ತಾಯಿ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಅಡಮಾನ ಮಾಡಿರುತ್ತಾರೆ. ನಿಡಿ-8 ನಮ್ಮ ಆಸ್ತಿಗೆ ಸಂಬಂಧಿಸಿದ್ದಾಗಿದೆ. ನಿಡಿ-8 ರಲ್ಲಿ 15X20 ವಿಸ್ತೀರ್ಣ ಎಂದು ನಮೂದಿಸಲಾಗಿದೆ. 15X20 ವಿಸ್ತೀರ್ಣದ ಜಾಗದಲ್ಲಿ ನೀವು ಸ್ವಾಧೀನದಲ್ಲಿ ಇದ್ದೀರಾ ಎಂದರೆ ಸಾಕ್ಷಿಯು ನಾವು 30X30 ವಿಸ್ತೀರ್ಣದ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಎಂದು ಸ್ವಇಚ್ಛೆಯಿಂದ ನುಡಿಯುತ್ತಾರೆ.

5. ನಿಡಿ-6 ಮಂಜೂರಾತಿ ಪತ್ರದಲ್ಲಿ 250 ರಿಂದ 700 ಚದರ ಅಡಿಗಿಂತ ಒಳಗಿನ ವಿಸ್ತೀರ್ಣದಲ್ಲಿ ಮನೆ ನಿರ್ಮಿಸಬೇಕು ಎಂದು ಷರತ್ತು ವಿಧಿಸಲಾಗಿದೆ ಎಂದರೆ ಸರಿ. 30X30 ಅಡಿ ವಿಸ್ತೀರ್ಣದ ಜಾಗದಲ್ಲಿ ಎರಡು ಮನೆಗಳನ್ನು ಕಟ್ಟಲಾಗಿದೆ. ನಮ್ಮ ಬಳಿ ಒಂದೇ ಖಾತಾ ಎಕ್ಸ್ ಟ್ರ್ಯಾಕ್ಟ್ ಇದೆ. ನಿಡಿ-5 ರಲ್ಲಿ ಎರಡೂ ಮನೆಯ ಬಗ್ಗೆ ನಮೂದಿಸಿರುವುದಿಲ್ಲ. ನಿಡಿ-5 ಒಂದೇ ಮನೆಗೆ ಸಂಬಂಧಿಸಿದ್ದಾಗಿದೆ. ನಿಡಿ-5 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯೊಳಗೆ ಜಾಗ ಇದೆ ಎಂದು ಇ-ಸ್ವತ್ತು ನೀಡಿದ್ದಾರೆ ಎಂದರೆ ಸರಿ. ನಿಡಿ-5 ರಲ್ಲಿ ಕಟ್ಟಡದ ವಿಸ್ತೀರ್ಣ 100.34 ಚದರ ಮೀಟರ್ ಎಂದು ನಮೂದಿಸಲಾಗಿದೆ ಎಂದರೆ ಸರಿ.

6. ನಾನು 700 ಚದರ ಅಡಿ ವಿಸ್ತೀರ್ಣದ ಜಾಗದಲ್ಲಿ ಮನೆ ಕಟ್ಟಲು ಸಾಧ್ಯವಿಲ್ಲ, 100.34 ಚದರ ಮೀಟರ್ ವಿಸ್ತೀರ್ಣದ ಸ್ವತ್ತಿನಲ್ಲಿ ಮನೆ ನಿರ್ಮಿಸಲು ಅನುಮತಿ ನೀಡುವಂತೆ ಕೋರಿ ಅರ್ಜಿ

ನೀಡಿರುವುದಿಲ್ಲ. 700 ಚದರ ಅಡಿ ಬಿಟ್ಟು 100.34 ಚದರ ಮೀಟರ್ ವಿಸ್ತೀರ್ಣದಲ್ಲಿ ಮನೆ ನಿರ್ಮಿಸಲು ಪಂಚಾಯಿತಿಯವರು ಯಾವುದೇ ಪರವಾನಿಗೆ ನೀಡಿರುವುದಿಲ್ಲ. ನಮ್ಮ ಮನೆಗೆ ಎರಡು ಬಾಗಿಲುಗಳು ಇವೆ. ಒಂದು ಪೂರ್ವಕ್ಕೆ ಮತ್ತೊಂದು ಪಶ್ಚಿಮಕ್ಕೆ ಇವೆ. ನಿಡಿ-3 ರಲ್ಲಿ ನನ್ನ ಮನೆ ಕಾಣುತ್ತಿದೆ. ನಿಡಿ-3 ನನ್ನ ಮನೆಯ ಪೂರ್ವದಿಕ್ಕಿಗೆ ಸಂಬಂಧಿಸಿದ್ದಾಗಿದೆ. ನಿಡಿ-3 ರಲ್ಲಿ ರಸ್ತೆ ಕಾಣುತ್ತಿದೆ. ಅದು 20 ಅಡಿ ಇದೆ.

**ಮುಂದುವರಿದ ಪಾಟೀ-ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.